ಪ್ರಮಾಣೀಕರಿಸಲಾದ ದಿನಾಂಕಃ **25.09.2025.**

<u>ಮುಂದುವರಿದ ಪಾಟೀ ಸವಾಲು ವಾದಿ ಪರ ಶ್ರೀ. ಎಸ್. ವಿ. ಎಸ್ ವಕೀಲರಿಂದಃ</u>

ದಾರಿ ವಿಚಾರ ಬಿಟ್ಟರೆ ವಾದಿ ಜೊತೆ ಬೇರೆ ಯಾವುದು ಮನಸ್ತಾಪ ಇಲ್ಲ. ನನ್ನ ಮತ್ತು ವಾದಿಯ ನಡುವೆ ಅಕ್ರಮ ಸ್ವಾದೀನ ಪ್ರಯತ್ನಾಗಳಾಗಿಲ್ಲ ಎಂದರೆ ಸರಿ. ನಾಲಕಟ್ಟೆಯಿಂದ ವಾದಿಯ ಗದ್ದೆಗೆ ಹೋಗುವ ಬೇರೊಂದು ರಸ್ತೆಯ ಉದ್ದ ಅಂದಾಜು 700 ಅಡಿ ಇರಬಹುದು. ನನ್ನ ಲಿಖಿತ ಹೇಳಿಕೆಯಲ್ಲಿ ರಸ್ತೆಗಳ ಅಂದಾಜು ವಿಸ್ತೀರ್ಣ ಹೇಳಿರುತ್ತೇನೆ ಎಂದರೆ ಸರಿ. ಪಂಚಾಯಿತಿಯಲ್ಲಿ ಸರ್ವೆ ನಂ 42/3, 42/4 ಜಮೀನುಗಳಲ್ಲಿ ವಾದಿಯ ಗದ್ದೆ ಮತ್ತು ತೋಟಕ್ಕೆ ಹೋಗುವುದಕ್ಕೆ ಮಾನವೀಯತೆ ಮೇಲೆ ಬಿಟ್ಟರುತ್ತೇನೆ ಎಂದು ಶರತ್ತುಬದ್ದವಾಗಿ ಒಪ್ಪಿಕೊಂಡಿದ್ದೆ.

ವಾದಿಗಳ ಕೂಲಿ ಕೆಲಸಗಾರರ ಲೈನ್ ಮನೆಗಳು ಆ ಸರ್ವೆ ನಂ 42/3, 42/4 ಗಳಲ್ಲಿ ಇದಿಯೋ ಇಲ್ಲವೋ ಗೊತ್ತಿಲ್ಲ. ವಾದಿಯರ ಲೈನ್ ಮನೆ ನೋಡಿದ್ದೇನೆ. ಸಾಕ್ಷಿಗೆ 3 ಫೋಟೋಗಳನ್ನು ತೋರಿಸಿದ್ದು ಅವುಗಳಲ್ಲಿ ಈಗ ನಿಶಾನೆಗೊಳಿಸಿದ ನಿ. ಪಿ. 51 ರಲ್ಲಿ ಕಾಣುವ ಸ್ವಂತ ರಸ್ತೆ, ನಿ. ಪಿ. 52 ಮತ್ತು 53 ನಿಶಾನೆಗಳು ವಾದಿಯ ಲೈನ್ ಮನೆ ಮತ್ತು ದನದ ಕೊಟ್ಟಿಗೆ. ಈ ಲೈನ್ ಮನೆಯಿಂದ 2 ಕಿ. ಮೀ ದೂರದಲ್ಲಿ ವಾದಿ ಮನೆ ಇರುತ್ತದೆ. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಿದ್ದು ವಾದಿಯಲೈನ್ ಮನೆಯನ್ನು ಗುರುತಿಸಿದ್ದು ಅದರ ಪಕ್ಕದಲ್ಲಿ ಸಾಕ್ಷಿಯ ಗದ್ದೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 54 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಿದ್ದು ಅದರಲ್ಲಿ ಕಾಣಿಸುತ್ತಿರುವ ರಸ್ತೆ ನನ್ನ ತೋಟಕ್ಕೆ ಹೋಗುವ ರಸ್ತೆ ಎಂದು ಒಪ್ಪಿದ್ದು ಅದನ್ನು ನಿ. ಪಿ. 55 ಎಂದು ಗುರುತಿಸಲಾಯಿತು. ಪ್ರತಿವಾದಿ ಪರ ವಕೀಲರು ಈ ಫೋಟೋಗಳನ್ನು ಕಲಂ 65 ಬಿ ಭಾ ಸಾ ಅದಿನಿಯಮದಡಿಯಲ್ಲಿ ಪ್ರಮಾಣ ಪತ್ರ ಇಲ್ಲದಿರುವುದರಿಂದ ಮತ್ತು ಯಾವುದೇ ಸಿ. ಡಿ. ಇಲ್ಲದಿರುವುದರಿಂದ ಅವುಗಳನ್ನು ಗುರುತಿಸಲು ಆಕ್ಷೇಪಿಸಿದ್ದು, ಆ ಆಕ್ಷೇಪಣೆಯನ್ನು ಒಳಗೊಂಡಂತೆ ಅವುಗಳನ್ನು

ನಿಶಾನೆಗೊಳಿಸಲಾಯಿತು. ತೀರ್ಪಿನ ವೇಳೆ ಇವುಗಳ Admissibility ಬಗ್ಗೆ ತೀರ್ಮಾನಿಸಲಾಗುವುದು.

ಮಾಯಮುಡಿ ಗ್ರಾಮ ಪಂಚಾಯಿತಿ ರಸ್ತೆ ಕಾಮಗಾರಿಗೆ Estimation ಕೊಟ್ಟಿದ್ದು ಅದು ಕೋಣಿಯಂಡ ಕುಟುಂಬದ ರಸ್ತೆಗೆ ಹೋಗುವ ಕಾಮಗಾರಿಗೆ ಸಂಬಂಧಪಟ್ಟಿರುತ್ತದೆ ಎಂದು ಇದೆ ಎಂದರೆ ಸರಿ, ಈ ರಸ್ತೆಯ ನನ್ನ ಗದ್ದೆವರೆಗೂ ಕಾಮಗಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾಲಕಟ್ಟೆ ರಸ್ತೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ ಈ ಎರಡು ರಸ್ತೆಗಳು ಒಂದೇ ಆಗಿರುತ್ತದೆ. ನಿ. ಪಿ. 41 ಮಹಜರ್‌ನಲ್ಲಿ ಸಾಕ್ಷಿಯು ಸಹಿಯನ್ನು ನೋಡಿ ಒಪ್ಪಿದ್ದು ಮಹಜರ್ ವೇಳೆ ಸಹಿ ಹಾಕಿರುವುದನ್ನು ಒಪ್ಪಿರುತ್ತಾರೆ. ಈ ದಾಖಲೆಯಂತೆ ರಸ್ತೆ 600 ಮೀ ಇದ್ದು ಅಲ್ಲಿಯವರೆಗೂ ವಾದಿ ಓಡಾಡಲು ಅಭ್ಯಂತರ ಇಲ್ಲ ಎಂದು ಹೇಳಿರುತ್ತೇನೆ, ಮುಂದುವರೆದು ಅದು 600 ಅಡಿ ಎಂದು ಹೇಳಿರುತ್ತಾರೆ. alternative road ಇದೆ ಎಂದು ಹೇಳುತ್ತಿದ್ದು ಅದನ್ನು ನ್ಯಾಯಾಲಯದ ನಿಯೋಗಿ ಕಡೆಯಿಂದ ಗುರುತಿಸಲು ಅಭ್ಯಂತರ ಇಲ್ಲ. ವಾದಿಗೆ ನನ್ನ ಗದ್ದೆಯ ಮೇಲೆ ಅವರ ಗದ್ದೆಗೆ ಹೋಗಲು ರಸ್ತೆ ಇದ್ದು, ನಾನು ರಸ್ತೆ ಬಿಡದಿದ್ದರೆ ಅವರಿಗೆ ಆ ಗದ್ದೆಯನ್ನು ಅನುಭವಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. Counter claim ನಲ್ಲಿ ಕೇಳಿರುವ ಪರಿಹಾರ ಪಡೆಯಲು ನಾನು ಬದ್ಧನಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಸಿದಂತೆ ವಾದಿಯು ನನ್ನ ಗದ್ದೆ ತೋಟವನ್ನು ಕಬಳಿಸಲು ಪ್ರಯತ್ನಿಸಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/-**
ಸಿವಿಲ್ ನ್ಯಾಯಾಧೀಶರು,ಪೊನ್ನಂಪೇಟೆ.